ಹೆಂಗಸರ ಗುಂಪಿನಲ್ಲಿ ಆಕೆ ಸುಳಿದಾಡಿದರೆ ಬೆಣ್ಣೆ ತೇಲಿದಂತಿರುತ್ತಿದ್ದಳು. ಆಕೆ ಅಲ್ಲಿದ್ದಾಳೆನ್ನುವುದೇ ಧೈರ್ಯದ ಸೂಚಕವಾಗಿತ್ತು. ಆಕೆ ಇದ್ದರೆ ಗುಂಪು ಶಕ್ತಿದಾಯಿನಿಯಾಗುತ್ತಿತ್ತು. ಆಕೆಯ ಮಾತುಗಳನ್ನು ಕೇಳಲು ಎಲ್ಲರೂ ಉತ್ಸುಕರಾಗುತ್ತಿದ್ದರು. ಆಕೆಯ ಮಾತುಗಳು ಕೂಡ ಮಕ್ಕಳು ಹರಿದಾಡಿದಂತಿರುತ್ತಿದ್ದವು. ಯಾವ ಕೇಡಿನ ಸ್ಪರ್ಶವೂ ಇಲ್ಲದ, ನೈತಿಕ ಚೈತನ್ಯದ ಆಕೆಯ ಮಾತುಗಳು ಸ್ಪಷ್ಟ ಹಾಗು ನೇರವಾಗಿರುತ್ತಿದ್ದವು. ನೆಮ್ಮದಿ ಉಕ್ಕಿಸುತ್ತಿದ್ದವು. ಆ ಮುಗ್ಧತೆ, ನಿಷ್ಕಳಂಕದಲ್ಲಿ ದೇವರು ಕಾಣುತ್ತಿದ್ದನು. ಆಕೆಯು ಹೇಳಿದ್ದು ನಿರ್ಣಾಯಕ ಮಾತುಗಳು ಎನ್ನುವಂತೆ ಎಲ್ಲರೂ ಸ್ವೀಕರಿಸುತ್ತಿದ್ದರು. ಆಕೆ ಹಾಗೆಯೇ ಇದ್ದಳು.

ಒಂದು ಸಂತೆಯ ದಿನ, ಬೆವರಿನ ಜಳಕ ಮಾಡಿದಂತಿದ್ದ ಆಕೆ, ಮೆಂತೆಸೊಪ್ಪು, ಸಬ್ಬಸಗಿ ಪಲ್ಲೆ, ಹೀರೆಕಾಯಿ, ಹಾಗಲಕಾಯಿ, ಎಲ್ಲವನ್ನೂ ಸಣ್ಣಚೀಲದಲ್ಲಿ ತುಂಬಿ, ಇದರ ಹೆಸರು ಸಂಸಾರ ಎಂದು ಹೇಳಿ ನಕ್ಕಿದ್ದಳು.

ಗಂಡ, ಮಕ್ಕಳ ಜೊತೆಗಿನ ಸಹವಾಸ ಯುದ್ಧ ಎಂದೂ ಅಕ್ಕತಂಗಿಯರು, ಅಣ್ಣತಮ್ಮಂದಿರ ಜೊತೆಗಿನ ಸಂಬಂಧ ಶಾಂತಿ ಎಂದು ಕೈಬಡಿದು ಖೊಕಾಸಿ ನುಡಿದಿದ್ದಳು.

★★★

ಈಕೆ ಯಾರು? ಅದು ಅಚ್ಚರಿ ಹುಟ್ಟಿಸಿದೆ! ಹೌದು! ಈಕೆ ತಂಗಿ, ನೀವು ಒಮ್ಮೆಯಾದರೂ ಆರತಿ ತಟ್ಟೆಯನ್ನು ಲಕ್ಷ್ಯಗೊಟ್ಟು ನೋಡಿರುವಿರಾ? ದುಂಡಗಿನ ಬಲು ಮಾಟಾದ ಬೆಳ್ಳಿಯ ತಟ್ಟೆ, ಅದರ ಒಡಲಲ್ಲಿ ಅರಿಸಿನ ಕುಂಕುಮದ ಬಟ್ಟಲುಗಳು, ಹೊಳೆವ ಮುತ್ತುಗಳಿಂದ ಅಪ್ಪಿ ನಿಂತ ಕಳಸದ ತಂಬಗಿ, ಬಟ್ಟಲುಗಣ್ಣಿನಂಥ ಎರಡು ದೀಪಗಳು, ತಟ್ಟೆಯ ತುಂಬ ಹರಿದಾಡುವ ದೀಪದ ಮಂದ ಛಾಯೆ, ನನ್ನ ತಂಗಿಯ ಮುಖ ಆರತಿ ತಟ್ಟೆಯಂತೆಯೇ ಮಂಗಳ ಪೂರ್ಣವಾಗಿತ್ತು. ಅರಿಸಿನ ಕೊಂಬಿಗೆ ಹಸಿರು ಸೀರೆ ಉಡಿಸಿದಂತಿದ್ದಳು. ಈಕೆ ಸಣ್ಣವಳಿದ್ದಾಗ ಹಾಲಿನಂತಿದ್ದವಳು, ಬೆಳೆಯುತ್ತ ಬೆಳೆಯುತ್ತ ಹರಿಯುವ ಹೊಳೆಯಂತಾದಳು. ಬದುಕಿನ ಕಷ್ಟ ನಷ್ಟಗಳನ್ನು ಅನುಭವಿಸಿದ ನಂತರ ಎಲ್ಲ ತೆರೆಗಳಿಗೂ ತಾನೇ ಒಡತಿ ಎನ್ನುವ ಹಾಗೆ ವಿಸ್ತಾರದ ಕಡಲಾದಳು. ಈಕೆ ಗಂಡನನ್ನೂ, ಮಕ್ಕಳನ್ನು, ಮೊಮ್ಮಕ್ಕಳನ್ನು ಬೆಳೆಸಿದ ರೀತಿ ಕೈಯಳತೆಯ ಕೆಲಸದಂತೆ ಕಂಡಿತು. ಈಕೆ ತನ್ನ ಸಂಸಾರದ ಸ್ವಂತದ ಡೇರೆ ದಾಟಿ, ಎಲ್ಲ ಕಡೆ ಚೆಲ್ಲಿಕೊಂಡದ್ದು ಸೂರ್ಯನ ಬೆಳಕಿನಂತೆ. ಶಾಲೆ, ಶಾಲೆ ಮಕ್ಕಳಿಗೆ ಪಾಠ; ಸಹೋದ್ಯೋಗಿಗಳು, ಸಹೋದ್ಯೋಗಿಗಳ ಕಷ್ಟಸುಖಗಳು; ಮುಖ್ಯ ಶಿಕ್ಷಕರು, ಮುಖ್ಯ ಶಿಕ್ಷಕರ ಹೆಚ್ಚುವರಿ ಕೆಲಸಗಳು; ಕಸ ಗುಡಿಸುವವರು, ಪರಿಹಾರವಾಗದೇ ಉಳಿದ ಅಹವಾಲುಗಳು; ಹೊಸದಾಗಿ ಬಂದ ಹದಿಹರೆಯದ ಶಿಕ್ಷಕಿ, ಆಕೆಯ ಸ್ವರತಪ್ಪಿದ ಪ್ರೇಮದ ಆಲಾಪಗಳು; ಶಾಲೆಯ ಮೈದಾನದ ಬಳಿಯ ಗಿಡದ ಮೇಲಿನ ಹಕ್ಕಿಪಕ್ಷಿಗಳು, ಅವುಗಳಿಗಾಗಿ ಪ್ರತ್ಯೇಕ ಡಬ್ಬಿಯಲ್ಲಿ ತಂದ ಅನ್ನ; ಹರಿದ ಹಾಳೆಯ ತುಣುಕುಗಳಂತೆ ಪವಡಿಸಿದ ಮಕ್ಕಳು, ಅವುಗಳ ತುಟಿಗಳ ಮೇಲೆ ನಗೆಯ ಪುಟ್ಟ ದೋಣಿಗಳನ್ನು ತೇಲಿಸುವ ಶ್ರಮ; ಮನೆಯ ಸಾಲಕ್ಕಾಗಿ ಬ್ಯಾಂಕಿನ ಅರ್ಜಿ ತಂದ ಸಹಶಿಕ್ಷಕ, ಅರ್ಜಿಯ ಮೇಲೆ ಜಾಮೀನಾಗಿ ರುಜು; ಊರಲ್ಲಿ ಅಕ್ಕಮಹಾದೇವಿ ಮಂಡಳಿಯ ಕಾರ್ಯಕ್ರಮ, ಕಾರ್ಯಕ್ರಮದ ನೀಲಿ ನಕಾಶೆಯ ತಯಾರಿ; ಪರಿಚಯಸ್ಥರು ಕೊಟ್ಟ ಮದುವೆಯ ಕರೆಯೋಲೆ, ಕರೆಯೋಲೆಗೆ ತಕ್ಕಂತೆ ಸಮಯ ಹೊಂದಿಸಿಕೊಂಡು ಹಾಜರಿ; ಎಲ್ಲಿಂದಲೋ ತೂರಿ ಬಂದ ಸಾವಿನ ಸುದ್ದಿ, ಸುದ್ದಿಯ ಜಾಡು ಹಿಡಿದು ಸಾವಿನ ಮನೆಗೆ ಭೇಟಿ; ಆಕೆಯ ಮುಖದಲ್ಲಿ ಇಳಿಯುತ್ತಿದ್ದ ನೀರು, ಬಿಸಿ ಉಸುರಿನ ಕಣ್ಣೀರೋ, ಬೆವರಿನ ಭಾರದ